**1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು, ದ.ಕ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:406/2023**

| | |
|---|---|
| 1 ನೇ ಆರೋಪಿಯ ಹೆಸರು | : ಯುಸೂಫ್, |
| ತಂದೆಯ ಹೆಸರು | : ಮಮ್ಮುಂಞಿ, |
| ವಯಸ್ಸು | : 61 ವರ್ಷ |
| ವಾಸ್ತವ್ಯ | : ಬೊಳ್ಳಿಬುಂಳ್ಳ ಮನೆ, ಆರ್ಲಪದವು ಅಂಚೆ, ಪಾಣಾಜೆ ಗ್ರಾಮ, ಪುತ್ತೂರು. |
| 2 ನೇ ಆರೋಪಿಯ ಹೆಸರು | : ಅಬ್ದುಲ್ ಅಜೀಜ್, |
| ತಂದೆಯ ಹೆಸರು | : ಇಬ್ರಾಹಿಂ, |
| ವಯಸ್ಸು | : 39 ವರ್ಷ |
| ವಾಸ್ತವ್ಯ | : ಬೊಳ್ಳಿಬುಂಳ್ಳ ಮನೆ, ಆರ್ಲಪದವು ಅಂಚೆ, ಪಾಣಾಜೆ ಗ್ರಾಮ, ಪುತ್ತೂರು. |
| 3 ನೇ ಆರೋಪಿಯ ಹೆಸರು | : ಮಹಮ್ಮದ್ ಖಲಂದರ್, |
| ತಂದೆಯ ಹೆಸರು | : ಯುಸೂಫ್, |
| ವಯಸ್ಸು | : 32 ವರ್ಷ |
| ವಾಸ್ತವ್ಯ | : ಬೊಳ್ಳಿಬುಂಳ್ಳ ಮನೆ, ಆರ್ಲಪದವು ಅಂಚೆ, ಪಾಣಾಜೆ ಗ್ರಾಮ, ಪುತ್ತೂರು. |
| 4 ನೇ ಆರೋಪಿಯ ಹೆಸರು | : ಸಫಿಯ, |
| ತಂದೆಯ ಹೆಸರು | : ಯುಸೂಫ್, |
| ವಯಸ್ಸು | : 49 ವರ್ಷ |
| ವಾಸ್ತವ್ಯ | : ಬೊಳ್ಳಿಬುಂಳ್ಳ ಮನೆ, ಆರ್ಲಪದವು ಅಂಚೆ, ಪಾಣಾಜೆ ಗ್ರಾಮ, ಪುತ್ತೂರು. |

5 ನೇ ಆರೋಪಿಯ ಹೆಸರು : ಅಬ್ದುಲ್ ರಜಾಕ್,

ತಂದೆಯ ಹೆಸರು : ಇಬ್ರಾಹಿಂ,

ವಯಸ್ಸು : 40 ವರ್ಷ

ವಾಸ್ತವ್ಯ : ಬೊಳ್ಳಿಬಂಳ್ಳ ಮನೆ, ಆರ್ಲಪದವು ಅಂಚೆ, ಪಾಣಾಜೆ ಗ್ರಾಮ, ಪುತ್ತೂರು.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರನ್ವಯ ಆರೋಪಿಯ ವಿಚಾರಣೆ**

ಪ್ರಶ್ನೆ ನಂ.1 ನೀವು ನ್ಯಾಯಾಲಯದ ಮುಂದೆ ವಿಚಾರಣೆಯಾದ ಎಲ್ಲಾ ಸಾಕ್ಷಿದಾರರ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

ಉತ್ತರ :

ಪ್ರಶ್ನೆ ನಂ.2 : ಫಾಸಾ1 (ಶ್ರೀ ಕೆ ಎ ಅಲಿ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನನಗೆ ಸೇರಿದ ಕೃಷಿ ಭೂಮಿ ಆರ್ಲಪದವು ಗ್ರಾಮದಿಂದ ಸ್ವಲ್ಪ ದೂರದಲ್ಲಿ ಕಂಚಿಲಕುಂಜ ಎನ್ನುವ ಜಾಗದಲ್ಲಿ ಇರುತ್ತದೆ. ದಿ.4-10-2015 ರಂದು ನಾನು ಬೆಳಗ್ಗೆ 10.00 ರಿಂದ 11.00 ಗಂಟೆಯ ಸಮಯದಲ್ಲಿ ಬೊಳ್ಳಿಂಬಲ ಕಲ್ಲಪದವು ರಸ್ತೆಯಲ್ಲಿ ನನ್ನ ತೋಟಕ್ಕೆ ಹೋಗುತ್ತಿದ್ದೆನು. ಆಗ ಆರೋಪಿತರಾದ ಯೂಸುಫ್, ಅಬ್ದುಲ್ ಅಜೀಜ್, ಮಹಮದ್ ಕಲಂದರ್, ಸಫಿಯಾ, ಅಬ್ದುಲ್ ರಜಾಕ್‌ರವರು ಅಲ್ಲಿ ಇದ್ದರು. ಅವರಲ್ಲಿ ಯೂಸುಫ್ ನನ್ನನ್ನು ನಾಯಿಂಡೆ ಮೋನೆ ನಿನಗೆ ಇಲ್ಲಿ ಏನು ಕೆಲಸ ಇದೆ ಎಂದು ಅವಾಚ್ಯ ಶಬ್ದಗಳಿಂದ ಬೈದನು. ನಂತರ ಯೂಸುಫ್ ಅಲ್ಲೇ ಇದ್ದ ಒಂದು ದೊಣ್ಣೆಯಿಂದ ಹೊಡೆಯಲು ಬಂದನು. ಅದರಿಂದ ನಾನು ತಪ್ಪಿಸಿಕೊಳ್ಳಲು ಹೋದಾಗ ನನ್ನ ಬಲಗೈಗೆ ದೊಣ್ಣೆಯ ಪೆಟ್ಟು ಬಿದ್ದು ಊತಗಾಯವಾಯಿತು. ಅಷ್ಟರಲ್ಲಿ ಅಬ್ದುಲ್ ಅಜೀಜ್ ರವರು ದೊಣ್ಣೆಯಿಂದ ನನ್ನ ತಲೆಯ ಮುಂಬಾಗಕ್ಕೆ ಹೊಡೆದಿದ್ದು ನಾನು ಬಿದ್ದಿರುತ್ತೇನೆ. ಆಗ ಮಹಮದ್ ಕಲಂದರ್, ಮತ್ತು ಅಬ್ದುಲ್ ರಜಾಕ್ ರವರು ನನ್ನ ಎಡಗೈ ಬೆರಳನ್ನು ತುಳಿದಿರುತ್ತಾರೆ. ಆಗ ಸಫಿಯಾರವರು ಅವನನ್ನು ಬಿಡಬೇಡಿ ಕೊಂದುಬಿಡಿ ಎಂದು ಜೀವಬೆದರಿಕೆ ಹಾಕಿರುತ್ತಾರೆ. ಆಗ ನಾನು ಬೊಬ್ಬೆ ಹೊಡೆದಿದ್ದು ಅಲ್ಲೇ ದಾರಿಯಲ್ಲಿ ಹೋಗುತ್ತಿದ್ದ ಅನ್ವರ್ ಸಾದಿಕ್ ಮತ್ತು ಇಸುಬು ಎನ್ನುವವರ ನನ್ನನ್ನು ಬಿಡಿಸಲು ಪ್ರಯತ್ನಿಸಿದರು. ಅಷ್ಟರಲ್ಲಿ ಎಲ್ಲಾ ಆರೋಪಿತರು ಸೇರಿಕೊಂಡು ನಿನ್ನನ್ನು ಇಷ್ಟರಲ್ಲೇ ಬಿಡುವುದಿಲ್ಲ, ಕೊಂದು ಬಿಡುತ್ತೇವೆ ಎಂದು ಜೀವಬೆದರಿಕೆ ಹಾಕಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.3 ಫಾಸಾ-1 ರವರು ಮುಂದುವರಿದು ನಂತರ ನನ್ನನ್ನು ಅನ್ವರ್ ಸಾದಿಕ್ ಎಂಬುವರು ಪುತ್ತೂರಿನೆ ಚೇತನಾ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗೆ ದಾಖಲಿಸಿದ್ದು ಅಲ್ಲಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೆನು. ನನ್ನನ್ನು ಡಾ.ಜೆ ಸಿ ಅಡಿಗ ಎಂಬುವರು ಉಪಚರಿಸಿದ್ದು ಅವರಿಗೆ ನಾನು ನಡೆದ ವಿಚಾರವನ್ನು ಮತ್ತು ನನಗೆ ಆದ ಗಾಯಗಳ ಬಗ್ಗೆ ತಿಳಿಸಿದ್ದೆನು. ನಂತರ ಸಂಪ್ಯ ಪೋ. ಠಾಣೆಯಿಂದ ಪೋಲೀಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಹೇಳಿಕೆಯನ್ನು ಪಡೆದು ಆರೋಪಿತರ ವಿರುದ್ಧ

ದೂರು ದಾಖಲಿಸುತ್ತೇವೆ ಎಂದು ಪೋಲೀಸರು ಹೋಗಿದ್ದು ಬಳಿಕ ನನ್ನ ವಿರುದ್ದವೇ ಕೇಸನ್ನು ದಾಖಲಿಸಿರುತ್ತಾರೆ. ನನ್ನ ಮತ್ತು ಆರೋಪಿತರ ನಡುವೆ ರಸ್ತೆಗೆ ಸಂಬಂಧಿಸಿದಂತೆ ವಿವಾದವಿದ್ದು ಅದರ ಸಂಬಂಧಿತವಾಗಿ ನನ್ನ ಮೇಲೆ ಆರೋಪಿತರು ಹಲ್ಲೆ ಮಾಡಿರುತ್ತಾರೆ. ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದ ಸಂಬಂಧ ಗಾಯದ ಪ್ರಮಾಣಪತ್ರದ ಯಥಾನಕಲನ್ನು ಹಾಗೂ ಪೋಲೀಸರು ನ್ಯಾಯಾಲಯಕ್ಕೆ ಸಲ್ಲಿಸಿರುವ ಬಿ ಅಂತಿಮ ವರದಿಯನ್ನು ನನ್ನ ಸಾಕ್ಷೀಕರಿಸಿದ ಹೇಳಿಕೆ ದಾಖಲಿಸುವ ಕಾಲಕ್ಕೆ ಹಾಜರುಪಡಿಸಿದ್ದೇನೆ. ಕೃತ್ಯ ನಡೆದ ಸ್ಥಳದಲ್ಲಿ ಮಾಡಲಾದ ಮಹಜರ್ ಮತ್ತು ತಯಾರಿಸಲಾದ ಕರಡು ನಕಾಶೆಯನ್ನು ಹಾಜರುಪಡಿಸಿದ್ದೇನೆ. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ ಎಂದು ಸಾಕ್ಷ್ಯನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.4 ಫ್ರಾಸಾ.2 (ಶ್ರೀ ಅನ್ವರ್ ಸಾದಿಕ್) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ದಿ 04.10.2015 ರಂದು ಬೆಳಿಗ್ಗೆ 10.00 ರಿಂದ 11.00 ರ ಸಮಯದಲ್ಲಿ ಪುತ್ತೂರು ತಾಲೂಕು ಪಾಣಾಜೆ ಗ್ರಾಮದ ಕಲ್ಲಪದವು ಬೊಳ್ಳಿಂಬಾಳ ರಸ್ತೆಯಲ್ಲಿ ಯೂಸುಫ್ ಎನ್ನುವವರು ಕೆ ಎ ಆಲಿ ಎನ್ನುವವರನ್ನು ನಾಯುಂಡೆ ಮನೆ ಇಲ್ಲಿ ನಿನಗೆ ಏನು ಕೆಲಸ ಎಂದು ಬೈದು ರೋಡು ಸೈಡ್ ನಲ್ಲಿರುವ ದೊಣ್ಣೆಯಲ್ಲಿ ಹೊಡೆಯಲು ಪ್ರಯತ್ನಿಸಿದಾಗ ಆಲಿಯವರು ತಪ್ಪಿಸಿಕೊಳ್ಳುವಾಗ ಅವರ ಬಲಗೈಗೆ ತಾಗಿ ಊತದ ಗಾಯವಾಗಿರುತ್ತದೆ. ಆದ ನಂತರ 2 ನೇ ಆರೋಪಿ ಆ ದೊಣ್ಣೆಯನ್ನು ತಂದು ಆಲಿಯವರ ತಲೆಗೆ ಹೊಡೆದಿರುತ್ತಾರೆ. ಆಗ ಅವರು ಕೆಳಗೆ ಬಿದ್ದಿರುತ್ತಾರೆ. ಅಲ್ಲಿಂದ 3 ಮತ್ತು 5 ನೇಯವರು ಅಲಿಯವರ ಎಡಕೈ ಬೆರಳನ್ನು ತುಳಿದಿರುತ್ತಾರೆ. ಅಲ್ಲಿ ಇದ್ದ 4 ನೇ ಆರೋಪಿ ಒಬ್ಬ ಮಹಿಳೆಯಾಗಿದ್ದು ಅವರ ಹೆಸರು ಸಫಿಯಾ ಆಗಿದ್ದು ಅವರನ್ನು ಇಷ್ಟಕ್ಕೇ ಬಿಡಬೇಡಿ ಕೊಂದು ಹಾಕಿ ಎಂದು ಹೇಳಿ ಎಂದು ಹೇಳಿ ಜೀವ ಬೆದರಿಕೆ ಹಾಕಿರುತ್ತಾರೆ. ನಾನು ಹಾಗೂ ಇಸುಬು ಜಗಳವನ್ನು ಬಿಡಿಸಲು ಹೋದಾಗ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ, ಈ ಸಲ ಬದುಕಿದ್ದೀಯಾ ಎಂದು ಆಲಿಯವರಿಗೆ ಹೇಳಿರುತ್ತಾರೆ. ನಂತರ ನಾನು ಆಟೋದಲ್ಲಿ ಕರೆದುಕೊಂಡು ಹೋಗಿ ಆಲಿಯವನ್ನು ಪುತ್ತೂರು ಚೇತನಾ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಿಸಿದ್ದೇನೆ. ಈ ಗಲಾಟೆಯು ರೋಡಿನ ವಿಷಯದಲ್ಲಿ ಆಗಿದ್ದು ಆರೋಪಿಗಳು ಆಲಿಯವರಿಗೆ ಹಲ್ಲೆ ಮಾಡಿರುತ್ತಾರೆ ಎಂದು ಸಾಕ್ಷ್ಯನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ೫ ಫ್ರಾಸಾ-3 (ಡಾ. ಜಂಬೂರು ಚಿದಂಬರ ಅಡಿಗ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಾನು 1996 ರಿಂದ ಪ್ರಸ್ತುತವೂ ಸಹ ಪುತ್ತೂರಿನ ಚೇತನ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದೇನೆ. ದಿ.04-10-2015 ರಂದು ಆಲಿ ಕೆಎ, ಆರ್ಲಪದವು ವಾಸಿ ಬೆ.10.00 ಗಂಟೆ ಸಮಯದಲ್ಲಿ ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ಅವರು ನೀಡಿದ ಮಾಹಿತಿಯಂತೆ ಆಲಿಯವರಿಗೆ ರಜಾಕ್, ಇಸುಬು, ಅಬ್ದುಲ್ ಅಜೀಜ್ ಹಾಗೂ ಇತರರು ಬೋಳಿಂಬಳದ ತನ್ನ ಫಾರಮ್ ಹೌಸ್ ಹತ್ತಿರ ಮರದ ಕೋಲಿನಿಂದ ತನಗೆ ಹಲ್ಲೆ ಆಗಿದೆ

ಎಂದು ತಿಳಿಸಿದರು. ನಾನು ಅವರನ್ನು ಪರೀಕ್ಷಿಸಿದಾಗ ಆಲಿಯವರಿಗೆ ತಲೆಯಲ್ಲಿ ನೋವು, ಎಡಕೈ ಹಾಗೂ ಬಲಗೈನಲ್ಲಿ ನೋವು ಕಾಣಿಸಿಕೊಂಡಿತ್ತು. ಆ ಜಾಗವನ್ನು ನಾನು ಒತ್ತಿದಾಗ ಆಲಿಯವರಿಗೆ ನೋವು ಆಗಿರುವುದು ಕಂಡುಬಂತು. ಅಲಿಯವರ ದೇಹದ ಹೊರಭಾಗದಲ್ಲಿ ಎಲ್ಲಿಯೂ ಕೂಡಾ ಗಾಯಗಳು ಆಗಿದ್ದ ಚಿನ್ಹೆ ಕಂಡುಬಂದಿರುವುದಿಲ್ಲ. ಆಲಿಯವರು ನಮ್ಮ ಆಸ್ಪತ್ರೆಯಲ್ಲಿ ದಿ.4-10-2015 ರಂದ ದಿ.8-10-15 ರ ವರೆಗೆ ಒಳರೋಗಿಯಾಗಿ ದಾಖಲಾಗಿ ತಮಗೆ ಆದ ಗಾಯಗಳಿಗೆ ಚಿಕಿತ್ಸೆ ಪಡೆದಿದ್ದಾರೆ. ಆಲಿಯವರು ಚಿಕಿತ್ಸೆ ಪಡೆಯುವಾಗ ಅವರ ಕೈಗಳ ಎಕ್ಸರೇ ಹಾಗೂ ತಲೆಯ ಭಾಗದ ಸಿಟಿ ಸ್ಕ್ಯಾನ್ ತೆಗೆಸಿ ಅವುಗಳನ್ನು ಪರಿಶೀಲಿಸಿದಾಗ ಆಲಿಯವರಿಗೆ ಆಂತರಿಕವಾಗಿ ಯಾವುದೇ ತೊಂದರೆ ಇರುವುದು ಕಂಡುಬಂದಿಲ್ಲ. ಒಬ್ಬ ವ್ಯಕ್ತಿಗೆ ದೊಣ್ಣೆಯಿಂದ ಹಲ್ಲೆ ಮಾಡಿ ಕಾಲಿನಿಂದ ತುಳಿದರೆ ನಾನು ಮೇಲೆ ಹೇಳಿದಂತಹ ಗಾಯಗಳು ಆಗುವ ಸಾಧ್ಯತೆಗಳು ಇರುತ್ತವೆ. ನಾನು ಆಲಿಯವರನ್ನು ಪರೀಕ್ಷಿಸಿ ಚಿಕಿತ್ಸೆ ನೀಡಿದ ಸಂಬಂಧ ಗಾಯದ ಪ್ರ ಪತ್ರವನ್ನು ನೀಡಿರುತ್ತೇನೆ. ನಾನು ಚಿಕಿತ್ಸೆ ನೀಡಿದ್ದ ಆಲಿಯವರನ್ನು ನೋಡಿದರೆ ಗುರುತಿಸಬಲ್ಲೆ. ನನ್ನ ಅಭಿಪ್ರಾಯದಂತೆ ಆಲಿಯವರಿಗೆ ಆಗಿದ್ದ ಗಾಯಗಳು ಸಾಮಾನ್ಯ ಸ್ವರೂಪದ್ದು ಎಂದು ಸಾಕ್ಷ್ಯ ನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ ?

**ಉತ್ತರ**

ಪ್ರಶ್ನೆ ನಂ.6 : ಆರೋಪಿಯಾದ **ನೀವು** ಈ ಪ್ರಕರಣದ ಬಗ್ಗೆ ಏನಾದರೂ ಹೇಳುವುದಿದೆಯಾ**?**

ಉತ್ತರ :

ಪ್ರಶ್ನೆ ನಂ.7 : **ನಿಮ್ಮ** ಪರ ಸಾಕ್ಷಿ ವಿಚಾರಣೆ ಮಾಡು **ವಿರಾ ?**

ಉತ್ತರ :

ಮೇಲಿನ ಹೇಳಿಕೆಯನ್ನು ಆರೋಪಿಯ ಹಾಜರಾತಿಯಲ್ಲಿ ಅವನು ನೀಡಿದ ಯಥಾವತ್ತು ಉತ್ತರವನ್ನು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು ಮತ್ತು ಹೇಳಿಕೆಯನ್ನು ಆರೋಪಿಯ ಹೇಳಿಕೆಯ ಸಂಪೂರ್ಣ ಮತ್ತು ಸರಿಯಾದ ಹೇಳಿಕೆಯೆಂದು ನಾನು ದೃಢೀಕರಿಸುತ್ತೇನೆ.

**ದಿನಾಂಕ** ಃ 20/07/2026

1 **ನೇ** ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು